## ಚಿಂಪಾಂಜಿಗಳ ಸಮರ

ಹಾಲಿವುಡ್‌ನಲ್ಲಿ 'ಸೈನ್ಸ್ ಫಿಕ್ಷನ್' ಸಿನಿಮಾಗಳು ಯಾವತ್ತೂ ಪ್ರೇಕ್ಷಕರ ಬರ ಎದುರಿಸಿದ್ದಿಲ್ಲ. ಅದರಲ್ಲೂ ಮನುಷ್ಯನಿಗೆ ಹತ್ತಿರವಾದ ಗೋರಿಲ್ಲಾ, ಚಿಂಪಾಂಜಿಗಳ ಬಗ್ಗೆ ಪ್ರೇಕ್ಷಕರಿಗೆ ಕುತೂಹಲ ಒಂದಿಷ್ಟು ಹೆಚ್ಚೇ. 'ದಿ ಪ್ಲಾನೆಟ್ ಆಫ್ ದಿ ಏಪ್ಸ್' ಸರಣಿ ಚಿತ್ರಗಳು ಈಗಾಗಲೆ ಜಗತ್ತಿನಾದ್ಯಂತ ಪ್ರೇಕ್ಷಕರ ಮನ ಗೆದ್ದಿವೆ. ಅದೇ ಸರಣಿಯಲ್ಲಿ ಈಗ ಹೊಸ ಚಿತ್ರ 'ವಾರ್ ಫಾರ್ ದಿ ಪ್ಲಾನೆಟ್ ಆಫ್ ದಿ ಏಪ್ಸ್' ಬಿಡುಗಡೆಯಾಗಿದೆ.

ಪ್ರಾಣಿಗಳನ್ನು ಮನುಷ್ಯ ವೈಜ್ಞಾನಿಕ ಪ್ರಯೋಗಕ್ಕಾಗಿ ಬಳಸಿಕೊಳ್ಳುವುದು ಮೊದಲಿನಿಂದ ನಡೆದುಬಂದಿದೆ. ಇಂತಹ ಒಂದು ಸಂದರ್ಭದಲ್ಲಿ ಮರಿ ಚಿಂಪಾಂಜಿಯೊಂದು ಮನುಷ್ಯನಂತೆಯೇ ಯೋಚಿಸುವ, ಮಾತನಾಡುವ ಶಕ್ತಿಗಳನ್ನು ಪಡೆಯುತ್ತದೆ. ಆದರೆ ಮನುಷ್ಯನ ದುರಾಸೆ ಈ ಜೀವಸಂಕುಲಕ್ಕೆ ಮುಳುವಾದಾಗ ಏನು ನಡೆಯುತ್ತದೆ ಎನ್ನುವುದು ಕಥೆಯ ತಿರುಳು. ಸ್ಟಾರ್ ಸ್ಟುಡಿಯೋಸ್ ನಿರ್ಮಾಣದ ಚಿತ್ರಕ್ಕೆ ಮ್ಯಾಟ್ ರೀವ್ಸ್ ನಿರ್ದೇಶನವಿದೆ. ತಮಿಳು ಮತ್ತು ತೆಲುಗು ಡಬ್ಬಿಂಗ್ ಕೂಡಾ ತೆರೆ ಕಂಡಿದೆ.





# ವಣಕ್ಕಂ ಕಾಜೋಲ್!

20 ವರ್ಷಗಳ ಬಳಿಕ ಕಾಜೋಲ್ ಮತ್ತೆ ತಮಿಳು ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ. ಈ ತಿಂಗಳ ಕೊನೆಗೆ ಬಿಡುಗಡೆಯಾಗಲಿರುವ 'ವಿಐಪಿ 2' ಚಿತ್ರದಲ್ಲಿ ಕಾಜೋಲ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಧನುಷ್ ಜತೆಗೆ ಮುಖಾಮುಖಿ ಅಭಿನಯ ನೀಡಿರುವುದು ವಿಶೇಷ. ತಮಿಳು ಮತ್ತು ಹಿಂದಿ ಎರಡೂ ಭಾಷೆಗಳಲ್ಲಿ ತಯಾರಾಗಿರುವ ಈ ಚಿತ್ರದ ಹಿಂದಿ ಟೈಟಲ್ 'ಲಲ್ಕಾರ್' ಎಂದಿಡಲಾಗಿದೆ. 'ವಿಐಪಿ 1' ಪಡೆದಷ್ಟೇ ಭರ್ಜರಿ ಯಶಸ್ಸನ್ನು ಈ ಸಿನಿಮಾ ಕೂಡಾ ಪಡೆಯಲಿದೆ ಎಂದು ತಮಿಳು ಚಿತ್ರರಂಗ ಭವಿಷ್ಯ ನುಡಿಯುತ್ತಿದೆ.

ಈ ಚಿತ್ರದಲ್ಲಿ ಕಾಜೋಲ್ ಸ್ವತಃ ತಮಿಳು ಡೈಲಾಗ್ ಹೇಳಿದ್ದಾರೆ. 'ನೀವು ತಮಿಳಿನಲ್ಲಿ ಮಾತನಾಡುವ ದೃಶ್ಯಗಳಿಲ್ಲ ಎಂದು ಸುಳ್ಳು ಹೇಳಿ ನನ್ನನ್ನು ಚೆನ್ನೈಗೆ ಕರೆಸಿಕೊಂಡರು. ಮೊದಲ ದಿನವೇ ಲಾಂಗ್ ಸ್ಕ್ರಿಪ್ಟ್ ಮತ್ತು ಉದ್ದನೆಯ ಡೈಲಾಗ್‌ಗಳಿರುವ ಎರಡು ದೃಶ್ಯಗಳು! ಆದರೆ ಧನುಷ್ ನಿಜಕ್ಕೂ ತುಂಬ ಸಹಕರಿಸಿದರು, ತಮಿಳು ಕಲಿಸಿದರು..' ಎನ್ನುವುದು ಕಾಜೋಲ್ ಉವಾಚ. 'ವಿಐಪಿ 2' ನಲ್ಲಿ ಕಾಜೋಲ್‌ರದ್ದು ಶ್ರೀಮಂತ ಉದ್ಯಮಿಯ ಪಾತ್ರ.

ಈ ಆಗಸ್ಟ್ 5ಕ್ಕೆ ಕಾಜೋಲ್‌ಗೆ 43 ತುಂಬುತ್ತದೆ. ಬಾಲಿವುಡ್‌ನ ಸಾರ್ವಕಾಲಿಕ ಜನಪ್ರಿಯ (ಬಾಜಿಗಾರ್) ಜೋಡಿಗಳಲ್ಲಿ ಒಂದಾದ ಶಾರೂಕ್ ಖಾನ್ ಮತ್ತು ಕಾಜೋಲ್ ಈಗಲೂ ಅಷ್ಟೇ ಜನಪ್ರಿಯತೆಯನ್ನು ಉಳಿಸಿಕೊಂಡಿದ್ದಾರೆ. ಹಿಂದಿಯ ಅಂದಕಾಲತ್ತಿಲ್ ಹೀರೋಯಿನ್ ತನುಜಾ ಮಗಳಾದ ಕಾಜೋಲ್, ಎರಡು ಮಕ್ಕಳ ತಾಯಿಯಾದರೂ ತೆರೆಯ ಮೇಲಿನ ಆಕರ್ಷಣೆಯನ್ನು ಕಳೆದುಕೊಂಡಿಲ್ಲ. 'ವಿಐಪಿ 2' ಚಿತ್ರದ ಕಥೆ ಮತ್ತು ಡೈಲಾಗ್ ಸ್ವತಃ ಧನುಷ್ ಬರೆದಿದ್ದು, ಸೌಂದರ್ಯ ರಜನಿಕಾಂತ್ ನಿರ್ದೇಶಕಿ.

ಧನುಷ್ ತಮಿಳು ಮತ್ತು ಹಿಂದಿಯಲ್ಲಿ ಬ್ಯುಸಿ ನಟ. 'ವಿಐಪಿ 2' ಶೂಟಿಂಗ್ ಮುಗಿಸಿದ ಬೆನ್ನಲ್ಲೆ ತನ್ನ ಮೊತ್ತ ಮೊದಲ ಹಾಲಿವುಡ್ ಸಿನಿಮಾದಲ್ಲಿ ನಟಿಸಲು ಬೆಲ್ಜಿಯಂ ಗೆ ಹಾರಿದ್ದಾನೆ. ಅಲ್ಲಿ ಒಂದು ತಿಂಗಳ ವಾಸವಂತೆ. 'The